<u>ಸಿಸಿ ಸಂಖ್ಯೆ: **- 141/2016**</u>

ಸಿ.ಡಬ್ಲ್ಯೂ **:-1-** ಬಸಮ್ಮ

ದಿನಾಂಕ: 11**-06-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು **:-** ಆರೋಪಿ ಪರ ವಕೀಲರಾದ ಶ್ರೀ.ಬಿ ಕೆ ಎನ್ ವಕೀಲರಿಂದ **:-**</u>

1. ದಿ: 08.06.2015 ರಂದು ನಾನು ಹೊನ್ನಾಳಿ ಪೋಲಿಸ್ ಠಾಣೆಗೆ ಎಷ್ಟು ಗಂಟೆಗೆ ಬಂದಿದ್ದೆನು ಎಂದು ಈಗ ನನಗೆ ಹೇಳಲಾಗುವುದಿಲ್ಲ. ಆ ದಿನ ನಾನು ಪೋಲಿಸರಿಗೆ ದೂರು ಕೊಟ್ಟ ನಂತರವೇ ಪೋಲಿಸರು 1 ನೇ ಆರೋಪಿಯನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆತನ ಜೊತೆ ಕೆಲವು ಜನ ಸಂಬಂಧಿಕರು ಸಹ ಬಂದಿದ್ದರು ಎಂದರೆ ಸರಿ. ನಿಸಿ.6 ರಲ್ಲಿ ಎಡಗಡೆಗೆ ಕಾಣುತ್ತಿರುವ 3 ಜನ ವ್ಯಕ್ತಿಗಳೇ 1 ನೇ ಆರೋಪಿಯ ಸಂಬಂಧಿಕರು ಇರುತ್ತಾರೆ.

2. ಆ ದಿನ ಪೋಲಿಸ್ ಠಾಣೆಯಿಂದ ನೇರವಾಗಿ ನಾನು ಆಧರಿಸುವ ವಿವಾಹವಾಗಿದ್ದ ಸ್ಥಳಕ್ಕೆ ಬಂದಿದ್ದೆವು. ಆ ದಿನ 1 ನೇ ಆರೋಪಿತನು ಪೋಲಿಸರಿಗೆ ಈಗಾಗಲೇ ತನ್ನ ವಿವಾಹವು 2 ನೇ ಆರೋಪಿಯೊಂದಿಗೆ ಆಗಿರುವ ಬಗ್ಗೆ ತಿಳಿಸಿದ್ದನು ಎಂದರೆ ಸರಿಯಲ್ಲ. ಹೀಗಿದ್ದರು ಸಹ ಪೋಲಿಸರು ಒತ್ತಾಯ ಪೂರ್ವಕವಾಗಿ ದಬ್ಬಾಳಿಕೆ ಮಾಡಿ 1 ನೇ ಆರೋಪಿಯಿಂದ ನನಗೆ ತಾಳಿ ಕಟ್ಟಿಸಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದಲೇ 1 ನೇ ಆರೋಪಿತನ ಸಹೋದರ ಹಾಗೂ ಸಹೋದರಿಯರು ನಿಸಿ.5 ಮತ್ತು 6 ಪೋಟೋದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರು ಪೋಟೋಕ್ಕೆ ನಿಲ್ಲಲಿಲ್ಲ ಎಂದು ನುಡಿಯುತ್ತಾರೆ.

3. ಆರೋಪಿತರು ನನ್ನ ವಿರುದ್ದ ಹೊನ್ನಾಳಿ ಹೆಚ್ಚುವರಿ ನ್ಯಾಯಾಲಯದಲ್ಲಿ ದಾಖಲಿಸಿರುವ ಅಸಲು ದಾವ ನಂ.166/2015 ರಲ್ಲಿ ಆ ಕುರಿತಾದ ಪೋಟೋಗಳನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ 5 ಪೋಟೋಗಳನ್ನು ತೋರಿಸಿ ಅವುಗಳಲ್ಲಿ 1 ಮತ್ತು 2 ನೇ ಆರೋಪಿತರು ಇರುತ್ತಾರೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವುಗಳನ್ನು ನೋಡಿ ಇರುತ್ತಾರೆ ಎಂದು ಗುರುತಿಸಿದ್ದರಿಂದ ಸದರಿ ಪೋಟೋಗಳನ್ನು ಕ್ರಮವಾಗಿ ನಿಡಿ.1 ರಿಂದ 5 ಎಂದು ಗುರುತಿಸಲಾಯಿತು. ಸದರಿ ಪೋಟೋಗಳು 1 ಮತ್ತು 2 ನೇ ಆರೋಪಿತರ ಮದುವೆಯ ಸಮಯದಲ್ಲಿ ತೆಗೆದ ಪೋಟೋಗಳು ಎಂದರೆ ಸರಿಯಲ್ಲ.

4. 1 ನೇ ಆರೋಪಿತನು ದಿ: 10.08.2015 ರಂದು ಮನೆ ಬಿಟ್ಟು ಹೋದ ಬಗ್ಗೆ ನನ್ನ ದೂರಿನಲ್ಲಿ ನಮೂದಿಸಿದ್ದೇನೆಂದರೆ ಸರಿ. ಆ ಕುರಿತು ನಾನು ಪೋಲಿಸರಿಗೆ ದೂರು

ಕೊಟ್ಟಿದ್ದೆನು. ಆ ಕುರಿತು ನಿಸಿ.1 ರಂತೆ ಹಿಂಬರಹ ಕೊಟ್ಟಿದ್ದರು. ಆ ರೀತಿ ಕಾಣೆಯಾಗಿದ್ದಲ್ಲಿ ಕಾಣೆಯಾದ ಮರು ದಿನವೇ ದೂರು ನೀಡುತ್ತಿದ್ದೆ, ಆದರೆ ಆ ರೀತಿ ದೂರು ನೀಡದೇ ಈ ಪ್ರಕರಣಕ್ಕಾಗಿ ನಿಸಿ.1 ನ್ನು ಸೃಷ್ಟಿಸಿ ಹಾಜುರುಪಡಿಸಿದ್ದೇನೆಂದರೆ ಸರಿಯಲ್ಲ. ಆರೋಪಿತರು ದಾಖಲಿಸಿದ್ದ ಅಸಲು ದಾವೆಯ ಸಮನ್ಸ್ ನನಗೆ ಜಾರಿಯಾದ ನಂತರವೇ ನಿಸಿ.1 ರ ಕುರಿತಾದ ದೂರನ್ನು ಕೊಟ್ಟಿದ್ದೆನು ಎಂದರೆ ಸರಿಯಲ್ಲ.

5. 1 ನೇ ಆರೋಪಿಯೊಂದಿಗೆ ನಾನು ಕಾನೂನು ಬದ್ದವಾಗಿ ವಿವಾಹವಾಗದೇ ಇದ್ದರು ಸಹ ಆತನ ಮನೆಗೆ ಅತೀಕ್ರಮಣ ಪ್ರವೇಶ ಮಾಡಲು ಪ್ರಯತ್ನಿಸಿದ್ದಾಗ ಆತನು ಹಾಗೂ ಉಳಿದ ಆರೋಪಿತರು ತಡೆಯಲು ಪ್ರಯತ್ನಿಸಿರುತ್ತಾರೆಯೇ ವಿನಃ ನಾನು ಆಧರಿಸುವಂತೆ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನೊಂದಿಗೆ ನನ್ನ ವಿವಾಹವನ್ನು ರುಜುವಾತುಪಡಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

6. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ್ದರು ಎಂದ ತೋರಿಸಲು ಯಾವುದೇ ವೈದ್ಯಕೀಯ ವರದಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಈ ಹಿಂದೆಯೇ 2 ನೇ ಆರೋಪಿಯೊಂದಿಗೆ ವಿವಾಹವಾಗಿರುವ ಸಂಗತಿಯು ನನಗೆ ಗೊತ್ತಿದ್ದರು ಸಹ ನಾನು ಪೋಲಿಸರ ಮೂಲಕ ದಬ್ಬಾಳಿಕೆ ಮಾಡಿ 1 ನೇ ಆರೋಪಿಯಿಂದ ತಾಳಿ ಕಟ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಆ ಕಾರಣ ನಾನು ಆಧರಿಸುವಂತೆ ನಾನು 1 ನೇ ಆರೋಪಿಯ ಕಾನೂನು ಬದ್ದ ಪತ್ನಿ ಆಗದೇ ಇರುವುದರಿಂದ ನಾನು ಈ ಪ್ರಕರಣದಲ್ಲಿ ಆರೋಪಿತರ ವಿರುದ್ದ ಮಾಡಿರುವ ಯಾವುದೇ ಅಪರಾಧಗಳನ್ನು ಆರೋಪಿತರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಹೀಗಿದ್ದರು ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.